# ತೆಂಗಿನ ಮರಗಳಿಗೆ ಮಾರಕ ರೋಗ ವ್ಯಾಪಿಸದಂತೆ ರೆಡ್ ಅಲರ್ಟ್





ಕಾಸರಗೋಡು, ಜೂ. 15: ಮಾಲ್ಡೀವ್ಸ್, ಮ್ಯಾನ್ಮಾರ್, ಇಂಡೋನೇಷ್ಯಾ ಮತ್ತು ಫಿಲಿಫಿನ್ಸ್ ಮೊದಲಾದ ದೇಶಗಳಲ್ಲಿ ತೆಂಗಿನ ಮರಗಳಲ್ಲಿ ಹೊಸದಾಗಿ ಕಾಣಿಸಿಕೊಂಡಿರುವ ಮಾರಕ ರೋಗ ಯಾವುದೇ ಕ್ಷಣದಲ್ಲೂ ಭಾರತಕ್ಕೂ ಹರಡುವ ಸಾಧ್ಯತೆಯ ಹಿನ್ನೆಲೆಯಲ್ಲಿ ದೇಶದಲ್ಲಿ 'ರೆಡ್ ಅಲರ್ಟ್' ವಹಿಸುವಂತೆ ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರ (ಸಿಪಿಸಿಆರ್ಐ)ದ ನಿರ್ದೇಶಕ ಡಾ। ಪಿ. ಚೌಡಪ್ಪ ಅವರು ಸಿಪಿಸಿಆರ್ಐಯಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ 'ಉದಯವಾಣಿ' ಜ. 9ರಂದು ಸಚಿತ್ರ ವರದಿಯನ್ನು ಮಾಡಿತ್ತು.

ಬ್ರೋಂಟಿಸ್ಪ ಲೊಂಗಿಸ್ಸಿಮ, ಯಾಸ್ಪಿಡಿಯಾಟಸ್ ಮತ್ತು ವಲ್ಲೆಸ್ಸಿ ಎಸ್ಪಿ ಎಂಬ ಮೂರು ರೀತಿಯ ಕೀಟಗಳು ತೆಂಗಿನ ಮರಗಳು ಹಾಗೂ ಸಸಿಗಳಲ್ಲಿ ರೋಗಕ್ಕೆ ಕಾರಣವಾಗಿದೆ. ಬ್ರೋಂಟಿಸ್ಪ ಲೊಂಗಿಸ್ಸಿಮ ಕೀಟಗಳಿಂದ ಮಾಲ್ಡೀವ್ಸ್, ಇಂಡೋನೇಶ್ಯಾ, ಮ್ಯಾನ್ಮಾರ್ನಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿದ್ದು, ಅಪಾರ ನಾಶನಷ್ಟವನ್ನುಂಟುಮಾಡಿದೆ. ಯಾಸ್ಪಿಡಿಯಾಟಸ್ ಕೀಟಗಳಿಂದ ಫಿಲಿಪಿನ್ಸ್‌ನಲ್ಲಿ ಭಾರೀ ಹಾನಿಯಾಗಿದೆ. ವಲ್ಲೆಸ್ಸಿ ಎಸ್ಪಿ ಕೀಟಗಳು ತೆಂಗಿನ ಮೊಳಕೆಯಲ್ಲೇ ಕಂಡು ಬಂದಿದ್ದು, ತೆಂಗಿನ ಸಸಿಗಳು ಮೊಳಕೆಯಲ್ಲೇ ಹಾನಿಗೀಡಾಗುತ್ತದೆ.

ಇಂತಹ ಕೀಟಗಳು ನಮ್ಮ ದೇಶಕ್ಕೂ ವ್ಯಾಪಿಸುವ ಸಾಧ್ಯತೆಯಿದ್ದು, ಈ ಹಿನ್ನೆಲೆಯಲ್ಲಿ ದೇಶದ ಎಲ್ಲ ಬಂದರು, ವಿಮಾನ ನಿಲ್ದಾಣ ಮತ್ತು ತೋಟಗಾರಿಕಾ ಇಲಾಖೆಗಳ ಅಧಿಕಾರಿಗಳಲ್ಲಿ ಇದರ ಸುಳಿವು ಸಿಕ್ಕಲ್ಲಿ ಸಿಪಿಸಿಆರ್ ಐಗೆ ಮಾಹಿತಿ ನೀಡುವಂತೆ ಕೋರಿದ್ದಾರೆ. ಅತ್ಯಂತ ಶೀಘ್ರವಾಗಿಯೇ ವ್ಯಾಪಿಸುವ ಈ ರೋಗವನ್ನು ತಡೆಗಟ್ಟಲು ಕಠಿಣ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ವಿದೇಶದಿಂದ ಬರುವ ಪ್ರವಾಸಿಗರು ಸಹಿತ ಎಲ್ಲಾ ಪ್ರಯಾಣಿಕರ ಲಗೇಜುಗಳ ತಪಾಸಣೆ, ಆಹಾರ ಪದಾರ್ಥಗಳ ತಪಾಸಣೆ ಮತ್ತು ಪ್ರಯಾಣಿಕರನ್ನು ಕಠಿಣ ತಪಾಸಣೆಗೊಳಪಡಿಸಬೇಕಾಗಿದೆ ಎಂದು ಸಿಪಿಸಿಆರ್ಐ ನಿರ್ದೇಶಕರು ತಿಳಿಸಿದ್ದಾರೆ.